ಕ್ರ. ಸಂ.	ಜಿಲ್ಲೆಯ ಹೆಸರು	ಬಿಡುಗಡೆಯಾದ ಮೊತ್ತ (ಲಕ್ಷ ರೂ.ಗಳಲ್ಲಿ)
9.	ಚಾಮರಾಜನಗರ	3
10.	ಉತ್ತರ ಕನ್ನಡ	3
	ಒಟ್ಟು	80 ಲಕ್ಷಗಳು

ಅ) 31-1-2003ರ ಅಂತ್ಯಕ್ಕೆ ಜಲ್ಲಾ ಆಡಳಿತ ಹಾಗೂ ಕಾರ್ಮಿಕ ಇಲಾಖೆಯು ಸರ್ಕಾರದ ಇತರ ಅಧಿಕಾರಿಗಳ ಸಹಕಾರದೊಂದಿಗೆ ಸಮೀಕ್ಷೆ ನಡೆಸಿ, 39333 ಬಾಲ ಕಾರ್ಮಿಕರನ್ನು ಗುರುತಿಸಿರುತ್ತಾರೆ. ಅವರುಗಳ ಪೈಕಿ 7154 ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಹಾಗೂ 32179 ಮಕ್ಕಳನ್ನು ಅಪಾಯಕಾರಿ ಅಲ್ಲದ ಉದ್ದಿಮೆಗಳಲ್ಲಿ ಗುರುತಿಸಲಾಗಿದೆ.

ರಾಜ್ಯ ಸರ್ಕಾರವು ಗುರುತಿಸಿ ಬಾಲ ಕಾರ್ಮಿಕರನ್ನು ಪುನರ್ವಸತಿಗೊಳಿಸುವ ಸಲುವಾಗಿ ಬಾಲ ಕಾರ್ಮಿಕ ಕ್ರಿಯಾ ಯೋಜನೆ ಅಡಿಯಲ್ಲಿ ವಿಶೇಷ ವಸತಿ ಶಾಲೆಗಳನ್ನು ತೆರೆದು, ಗುರುತಿಸಿದ ಬಾಲ ಕಾರ್ಮಿಕರನ್ನು ವಿಶೇಷ ವಸತಿ ಶಾಲೆಗಳಲ್ಲಿ ದಾಖಲು ಮಾಡಿ, ಅವರಿಗೆ ವಸತಿ, ಅನೌಪಚಾರಿಕ ಶಿಕ್ಷಣ, ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ ಮೂಲಕ ಪುನರ್ವಸತಿ ಕಲ್ಪಿಸಿ ನಂತರ ಅರ್ಹ ಮಕ್ಕಳನ್ನು ಮುಖ್ಯವಾಹಿನಿ ಶಾಲೆಗೆ ಸೇರಿಸಲಾಗುತ್ತಿದೆ.

ಕ್ರಿಯಾ ಯೋಜನೆ ಅಡಿಯಲ್ಲಿ 20 ಜಿಲ್ಲೆಗಳಲ್ಲಿ 100 ವಿಶೇಷ ವಸತಿ ಶಾಲೆಗಳನ್ನು ಮಂಜೂರು ಮಾಡಿದ್ದು, ಅವುಗಳ ಪೈಕಿ 58 ವಿಶೇಷ ವಸತಿ ಶಾಲೆಗಳು ಈಗಾಗಲೇ ನಡೆಯುತ್ತಿವೆ.

ಉಳಿದ 7 ಜಿಲ್ಲೆಗಳಲ್ಲಿ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಅಡಿಯಲ್ಲಿ 124 ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ.

ಅಲ್ಲದೆ ನಾರ್ವೆಯನ್ ಸರ್ಕಾರದ ಆರ್ಥಿಕ ಸಹಾಯದೊಂದಿಗೆ, ಯೂನಿಸೆಫ್ ಸಹಯೋಗದೊಂದಿಗೆ ದಾವಣಗೆರೆ ಮತ್ತು ಗುಲ್ಬರ್ಗಾ ತಾಲ್ಲೂಕುಗಳಲ್ಲಿ ಸೂರಾಡ್ ಯೋಜನೆ ಅಡಿಯಲ್ಲಿ 16 ವಿಶೇಷ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ.

ಇವುಗಳಲ್ಲದೆ ಶಿಕ್ಷಣ ಇಲಾಖೆಯು ಬಾಲ ಕಾರ್ಮಿಕರು ಸೇರಿ, ಶಾಲೆಯಿಂದ ಹೊರಗಡೆ ಇರುವ ಮಕ್ಕಳನ್ನು "ಚಿಣ್ಣರ ಅಂಗಳ" ಕಾರ್ಯಕ್ರಮ ಮುಖಾಂತರ ಮುಖ್ಯ ವಾಹಿನಿ ಶಾಲೆಗಳಿಗೆ ಸೇರಿಸಲಾಗುತ್ತಿದೆ.

ಮಲ್ಪೆ - ಉಡುಪಿ - ಕಡಿಯಾಳಿ - ಆಗುಂಬೆ ರಸ್ತೆಗಳನ್ನು ಅಗಲ ಮಾಡುವುದು

87 (324) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ-ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಲ್ಪೆ-ಉಡುಪಿ-ಕಡಿಯಾಳಿ ಆಗುಂಬೆ ರಸ್ತೆ ಅಗಲ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಮಲ್ಪೆ-ಉಡುಪಿ-ಕಡಿಯಾಳಿ ಭಾಗ ಮಾತ್ರ);

ಆ) ಸದರಿ ಪ್ರಸ್ತಾವನೆಯಲ್ಲಿ ಸಿದ್ಧಪಡಿಸಿದ ಅಂದಾಜು ಮೊತ್ತವೆಷ್ಟು; (ವಿವರಗಳನ್ನು ನೀಡುವುದು);

ಇ) ಈ ಕಾಮಗಾರಿಗೆ ಸರ್ಕಾರ ಯಾವಾಗ ಮಂಜೂರಾತಿ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಇದೆ.

ಆ) ಪ್ರಸ್ತಾವನೆಯಲ್ಲಿರುವಂತೆ ರೇಖಾ ಅಂದಾಜು ಮೊತ್ತ ರೂ. 1,231.00 ಲಕ್ಷ.

		(ಲಕ್ಷ ರೂ.ಗಳಲ್ಲಿ)
1.	ಭೂಸ್ವಾಧೀನತೆ	6180.00
2.	ರಸ್ತೆ ಬರಿ ನಿರ್ಮಾಣ	27.60
3.	ಪೇವೆಮೆಂಟ್	334.65
4.	ಕ್ರಾಸಿಂಗ್ (ಮೋರಿ:ಸೇತುವೆ)	89.70
5.	ಹೆಚ್ಚುವರಿ ಪ್ರೀಮಿಯಂ	161.00
	ಒಟ್ಟು	1,230.95
	ಅಥವಾ	1,231.00

ಇ) ಅನುದಾನ ಲಭ್ಯತೆ ಆಧರಿಸಿ ಪರಿಶೀಲಿಸಲಾಗುವುದು.

ಉಡುಪಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಕ್ಕು ಪತ್ರ ನೀಡುವುದು

88 (327) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 31-01-2003ರ ವರೆಗೆ ಉಡುಪಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ 11 ಗ್ರಾಮ ಪಂಚಾಯತಿಗಳಲ್ಲಿ ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ಮನೆ ಕಟ್ಟಿ ವಾಸಿಸುತ್ತಿರುವ ಜನರ ಸಂಖ್ಯೆ ಎಷ್ಟು;

ಆ) ಇವರುಗಳಿಗೆ ಹಕ್ಕು ಪತ್ರಗಳನ್ನು ಯಾವಾಗ ನೀಡಲಾಗುವುದು.

ಇ) ಹಕ್ಕು ಪತ್ರ ನೀಡಿಕೆಯಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ನಿಯಮಾವಳಿಯಂತೆ ಅರ್ಜಿ ಸ್ವೀಕರಿಸಲು 01-01-2002 ಕಡೆ ದಿನಾಂಕವಾಗಿದ್ದು ಈ ಅವಧಿಯವರೆವಿಗೆ 2066 ಮಂದಿ 94ಸಿ ಅಡಿ ಅರ್ಜಿ ಸಲ್ಲಿಸಿರುತ್ತಾರೆ.

ಆ) ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿ ನಿಯಮಗಳು 1979ರ ನಿಯಮ 4 ರಲ್ಲಿ ಅವಕಾಶ ಇರುವಂತೆ ತಾತ್ಕಾಲಿಕ ಮಂಜೂರಾತಿ ಆದೇಶ ನೀಡಿದ ನಂತರ ಮಂಜೂರಾತಿದಾರರು ಸರ್ಕಾರಕ್ಕೆ ಭೂಮೌಲ್ಯ ಹಾಗೂ ಇನ್ನಿತರ ಶುಲ್ಕ ಪಾವತಿ ಮಾಡಿದ ಮೇಲೆ ನಿಯಮ 6 ರಲ್ಲಿನ ಅವಕಾಶದಂತೆ ಖಾಯಂ ಹಕ್ಕು ಪತ್ರ ನೀಡಲಾಗುವುದು.

ಇ) ಸರ್ಕಾರಕ್ಕೆ ಪಾವತಿಸಬೇಕಾದ ಭೂ ಮೌಲ್ಯ ಮತ್ತು ಇನ್ನಿತರೇ ಶುಲ್ಕಗಳ ವಿನಾಯ್ತಿ ನೀಡಲಾಗುವುದೆಂದು ಕಲ್ಪಿಸಿಕೊಂಡು ಮಂಜೂರಿದಾರರು ಹಣ ಪಾವತಿಸದೇ ಇರುವ ಕಾರಣ ಹಕ್ಕುಪತ್ರ ನೀಡಿಕೆಯಲ್ಲಿ ವಿಳಂಬವಾಗಿರುತ್ತದೆ.

ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ "94 ಸಿ" ಅರ್ಜಿ ಸಲ್ಲಿಸಿದವರ ತನಿಖೆ

89 (328) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?